ಕುವೆಂಪು ರಂಗಮಂದಿರಕ್ಕೆ ಬಿಡುಗಡೆಯಾದ ಹಣ

298 (1713) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಅರ್ಧಕ್ಕೆ ನಿಂತಿರುವ ಕುವೆಂಪು ರಂಗಮಂದಿರಕ್ಕೆ ಇದುವರೆವಿಗೂ ಸರ್ಕಾರವು ಬಿಡುಗಡೆ ಮಾಡಿರುವ ಹಣವೆಷ್ಟು;

ಆ) ಇದರಲ್ಲಿ ಸಾರ್ವಜನಿಕರ ಹಣವೆಷ್ಟು ಹಾಗೂ ಸರ್ಕಾರದ ಸಹಾಯಧನ ಎಷ್ಟು;

ಇ) ಈ ರಂಗಮಂದಿರವನ್ನು ಪೂರ್ಣಗೊಳಿಸಲು ಇನ್ನುಎಷ್ಟು ಹಣ ಬೇಕಾಗುತ್ತದೆ ಹಾಗೂ ಸರ್ಕಾರ ಯಾವಾಗ ಹಣ ಬಿಡುಗಡೆ ಮಾಡುತ್ತದೆ ?

ಶ್ರೀ ಜಿ.ಪರಮೇಶ್ವರ್ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) 29-2-1992ರ ವರೆಗೆ ಬಿಡುಗಡೆ ಮಾಡಿದ ಒಟ್ಟು ರೂ.15.93 ಲಕ್ಷ ರೂಪಾಯಿಗಳು.

ಆ) ಸರ್ಕಾರದ ಹಣ 15.93 ಲಕ್ಷ ರೂ.ಗಳು ಶಿವಮೊಗ್ಗ ನಗರ ಸಭೆಯಿಂದ 5.00 ಲಕ್ಷ ರೂ. ಗಳು.

ಇ) 1991-92ರ ದರಪಟ್ಟಿ ಪ್ರಕಾರ 85.00 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಸರ್ಕಾರದ ವತಿಯಿಂದ ನೀಡಬೇಕಾದ ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷೀಣಿಯವರೇ ಲಿಖಿತಮೂಲಕ ಉತ್ತರಿಸುವ 13-3-1992ರ 14 ಪ್ರಶ್ನೆಗಳು ಹಾಗೂ 32 ಪ್ರಶ್ನೆಗಳು 16-3-1992ರ ಲಿಖಿತಮೂಲಕ ಉತ್ತರಿಸುವ 52 ಪ್ರಶ್ನೆಗಳನ್ನು ಸದನದ ಮುಂದಿಡುತ್ತೇನೆ.

ಗ್ರಾಮೀಣ ತಾಂತ್ರಿಕ ಸೇವೆ ಇಲಾಖೆಯ ರಚನೆ

1067 (1454) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) : ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಜನರ ಬೇಡಿಕೆಗಳನ್ನು ಪೂರೈಸಲು ಸರ್ಕಾರದ ವತಿಯಿಂದ ಗ್ರಾಮೀಣ ತಾಂತ್ರಿಕ ಸೇವೆ ಇಲಾಖೆಯನ್ನು ರಚಿಸುವ ಬಗ್ಗೆ ಯಾವುದಾದೂ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ,ಪಂಚಾಯತ್ ರಾಜ್ ಮತ್ತು ಕಂದಾಯ ಸಚಿವರು) :

ಅ) ಹೌದು. ಈ ವಿಷಯವು ಸರ್ಕಾರದಿಂದ ಪರಿಶೀಲಿಸಲ್ಪಡುತ್ತಿದೆ.